# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 677 |
| ಸದಸ್ಯರ ಹೆಸರು | : | ಶ್ರೀ ಎಂ.ಎಲ್.ಅನಿಲ್ ಕುಮಾರ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11-12-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸದಾಗಿ ಹೈನುಗಾರಿಕೆ ಹಾಗೂ ಕೋಳಿ ಸಾಕಾಣಿಕೆ ಮಾಡುವ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಮಂಜೂರಾತಿ ಸಂಬಂಧ ಒಂದು ಟ್ರಾನ್ಸ್ ಫಾರ್ಮರ್‌ಗೆ ರೈತರಿಗೆ ಅಂದಾಜು ರೂ.85,000/- ಗಳನ್ನು (ಡೆಪಾಸಿಟ್ ಹೊರತುಪಡಿಸಿ) ಐ.ಎಫ್.ಸಿ. ಕಟ್ಟಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಉದ್ದೇಶಕ್ಕಾಗಿ ಇದನ್ನು ಕಟ್ಟಿಸಿಕೊಳ್ಳಲಾಗುತ್ತಿದೆ; ' (ಸಂಪೂರ್ಣವಾದ ಮಾಹಿತಿ ನೀಡುವುದು) | ಹೊಸದಾಗಿ ಹೈನುಗಾರಿಕೆ ಹಾಗೂ ಕೋಳಿ ಸಾಕಾಣಿಕೆ ಸ್ಥಾವರಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ. ಕಂಡೀಷನ್ಸ್ ಆಫ್ ಸಪ್ಲೈ (CoS) ನ ನಿಯಮ 7 ರ ಅನುಸಾರ ಅಗತ್ಯ ದಾಖಲಾತಿಗಳನ್ನು ಪಡೆದು ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಂಡೀಷನ್ಸ್ ಆಫ್ ಸಪ್ಲೈ (CoS) ನ Recovery of Expenditure 3.1.1 (ಗ್ರಾಮಠಾಣಾ ವ್ಯಾಪ್ತಿಯ ಒಳಗಿದ್ದಲ್ಲಿ) ಹಾಗೂ 3.2.3 (ಗ್ರಾಮಠಾಣಾ ವ್ಯಾಪ್ತಿಯ ಹೊರಗಿದ್ದಲ್ಲಿ) ನ ಅನುಸಾರ ಶುಲ್ಕ ಪಾವತಿಸಿಕೊಂಡು ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತದೆ. ಯಾವುದೇ ತರಹದ ಹೆಚ್ಚುವರಿ ಮೊತ್ತವನ್ನು ಪಾವತಿಸಿಕೊಳ್ಳಲಾಗುತ್ತಿರುವುದಿಲ್ಲ. |
| ಆ) | ಸದರಿ ಹೈನುಗಾರಿಕೆ ಹಾಗೂ ಕೋಳಿ ಸಾಕಾಣಿಕೆ ಚಟುವಟಿಕೆಗಳಿಗೆ ಎಲ್ಲಾ ರಿಯಾಯತಿ ದರಗಳನ್ನು ನೀಡಿದ್ದು, ಐ.ಎಫ್.ಸಿ ಗೆ ಹೆಚ್ಚಿನ ಮೊತ್ತವನ್ನು ಪಡೆಯುತ್ತಿರುವುದರಿಂದ ರೈತರಿಗೆ ಹೆಚ್ಚಿನ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; (ಸಂಪೂರ್ಣವಾದ ಮಾಹಿತಿ ನೀಡುವುದು) | |
| ಇ) | ರೈತರ ಹಿತದೃಷ್ಟಿಯಿಂದ ಸಂದಾಯ ಮಾಡಿಸಿಕೊಳ್ಳುತ್ತಿರುವ ಐ.ಎಫ್.ಸಿ. ಶುಲ್ಕವನ್ನು ಕೈಬಿಟ್ಟು ಸಂದಾಯ ಮಾಡಿಸಿಕೊಂಡ ಹಣವನ್ನು ರೈತರಿಗೆ ಹಿಂದಿರುಗಿಸಲು ಸರ್ಕಾರ ಚಿಂತಿಸುವುದೇ; | IFC ಶುಲ್ಕ ನಿಗದಿಪಡಿಸುವುದು. ಕೆ.ಇ.ಆರ್.ಸಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. |
| ಈ) | ಹಾಗಾದಲ್ಲಿ, ಯಾವ ಕಾಲಮಿತಿಯಲ್ಲಿ ಪಡೆಯಲಾಗುತ್ತಿರುವ ಐ.ಎಫ್.ಸಿ. ಮೊತ್ತವನ್ನು ಕೈಬಿಡಲಾಗುವುದು? (ಸಂಪೂರ್ಣವಾದ ಮಾಹಿತಿ ನೀಡುವುದು) | |

ಸಂಖ್ಯೆ: ಎನರ್ಜಿ 309 ಇಬಿಎಸ್ 2023

(ಕೆ.ಜೆ.ಜಾರ್ಜ್) 7/12/23
ಇಂಧನ ಸಚಿವರು